ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಸಿ-2/ಬಿಇಡಿ/206/11-12(ಭಾಗ-2)

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-560012.
ದಿನಾಂಕ: 4-07-2017.

ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ
ಜಿಲ್ಲಾ ಉಪ ನಿರ್ದೇಶಕರುಗಳಿಗೆ.

ಮಾನ್ಯರೆ,

ವಿಷಯ: 2013ನೇ ಸಾಲಿನಲ್ಲಿ ನೇಮಕಗೊಂಡ ಬಿ.ಇಡಿ. ಪದವಿಯನ್ನು ಹೊಂದಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಬಿ.ಇಡಿ ಪದವಿಯನ್ನು ಹೊಂದಲು ಕೋರ್ಸಿನ ಅವಧಿಗೆ ಶಿಷ್ಯ ವೇತನ ಪಾವತಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಡಿ 189 ಟಿಪಿಯು 2015 ದಿನಾಂಕ 28-12-2016.
2. ಈ ಕಚೇರಿ ಸಮ ಸಂಖ್ಯೆ: ಪತ್ರ ದಿನಾಂಕ 27-05-2017.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 189 ಟಿಪಿಯು 2015 ದಿನಾಂಕ 01-07-2017.

****

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇದ್ದ ಉಪನ್ಯಾಸಕ ಹುದ್ದೆಗಳಲ್ಲಿ 2013ನೇ ಸಾಲಿನಲ್ಲಿ ನೇಮಕಾತಿ ಮಾಡಿಕೊಂಡಿರುವ 1763 ಉಪನ್ಯಾಸಕರುಗಳಲ್ಲಿ ಬಿ.ಇಡಿ. ಪದವಿಯನ್ನು ಹೊಂದಿರದ ಉಪನ್ಯಾಸಕರುಗಳಿಗೆ ಸರ್ಕಾರವು ಉಲ್ಲೇಖ-1ರ ಪತ್ರದಲ್ಲಿ ಬಿ.ಇಡಿ ಪದವಿ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಿ, ಸದರಿ ಉಪನ್ಯಾಸಕರಿಗೆ ಶಿಷ್ಯ ವೇತನವನ್ನು ಮಂಜೂರು ಮಾಡಲು ಹಾಗೂ ಬಿ.ಇಡಿ ಪದವಿಯ ಅವಧಿಯನ್ನು ಡೈಸ್-ನಾನ್ (Dies non) ಮತ್ತು ವೇತನ ರಹಿತ ಅವಧಿ ಎಂದು ಪರಿಗಣಿಸಲಾಗುವುದು ಎಂದು ತಿಳಿಸಲಾಗಿತ್ತು.

ಬಿ.ಇಡಿ ಪದವಿಯ ಕೋರ್ಸಿಗೆ ದಾಖಲಾದ ಉಪನ್ಯಾಸಕರುಗಳಿಗೆ ಶೇಕಡ 50ರಷ್ಟು ವೇತನ ಪಾವತಿಸುವ ಬಗ್ಗೆ ಸೂಕ್ತ ಆದೇಶ ಹೊರಡಿಸಲು ಉಲ್ಲೇಖ-2ರ ಪತ್ರದಲ್ಲಿ ಕೋರಲಾಗಿತ್ತು. ಉಲ್ಲೇಖ-3ರಲ್ಲಿ ಸರ್ಕಾರವು 2013ನೇ ಸಾಲಿನಲ್ಲಿ ಬಿ.ಇಡಿ ಪದವಿಯನ್ನು ಹೊಂದಿಲ್ಲದೇ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಕಗೊಂಡಿರುವ ಉಪನ್ಯಾಸಕರುಗಳಿಗೆ ಬಿ.ಇಡಿ ಪದವಿ ಶಿಕ್ಷಣ ಪಡೆಯುವ ಅವಧಿಗೆ ಮಾಸಿಕ ರೂ.**24,000**/-ರಂತೆ ಏಕ ರೀತಿಯ ಶಿಷ್ಯ ವೇತನ (ಸ್ಟೈಫಂಡ್) ನೀಡಲು ಆದೇಶಿಸಿರುತ್ತದೆ. ಸದರಿ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

2013ನೇ ಸಾಲಿನಲ್ಲಿ ನೇಮಕವಾದ ಉಪನ್ಯಾಸಕರುಗಳ ಪೈಕಿ ಬಿ.ಇಡಿ ಪದವಿಯನ್ನು ಪಡೆಯದ ಉಪನ್ಯಾಸಕರೆಲ್ಲರೂ ಬಿ.ಇಡಿ ಪದವಿಗೆ ದಾಖಲಾಗಿರುವ ಬಗ್ಗೆ ಮಾಹಿತಿಯನ್ನು ಪಡೆದು ಖಚಿತಪಡಿಸಿಕೊಂಡು ಸರ್ಕಾರದ ಆದೇಶದ ಅನುಸಾರ ವೇತನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದು. ವೇತನ ಬಿಡುಗಡೆ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಅನುಸರಿಸಲು ತಿಳಿಸಿದೆ.

1. ಜಿಲ್ಲಾ ಉಪ ನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2013ನೇ ಸಾಲಿನಲ್ಲಿ ನೇಮಕಾಗೊಂಡ ಉಪನ್ಯಾಸಕರ ಪೈಕಿ ಬಿ.ಇಡಿ ಪಡೆಯದ ಎಲ್ಲಾ ಉಪನ್ಯಾಸಕರು ಬಿ.ಇಡಿ ಪದವಿಗೆ ದಾಖಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
2. ಬಿ.ಇಡಿ ಪದವಿಗೆ ದಾಖಲಾದ ಉಪನ್ಯಾಸಕ ಅಭ್ಯರ್ಥಿಯು ದಾಖಲಾದ ಕಾಲೇಜಿನ ವಿಳಾಸವನ್ನು ಸಂಗ್ರಹಿಸಿಕೊಂಡು ಸಂಬಂಧಪಟ್ಟ ಬಿ.ಇಡಿ ಕಾಲೇಜಿನ ಪ್ರಾಂಶುಪಾಲರಿಂದ ಪ್ರತಿ ತಿಂಗಳು ಕಾಲೇಜಿನ ತರಗತಿಗಳಿಗೆ ಹಾಜರಾಗುತ್ತಿರುವ ಬಗ್ಗೆ ಆಯಾ ತಿಂಗಳ ಹಾಜರಾತಿ ಪ್ರಮಾಣ ಪತ್ರವನ್ನು ಪಡೆದ ನಂತರವೇ ವೇತನ ಬಿಡುಗಡೆಗೆ ಕ್ರಮ ವಹಿಸುವುದು.

..2

3. ಉಪನ್ಯಾಸಕ ಅಭ್ಯರ್ಥಿಗಳು ದಾಖಲಾದ ಶಿಕ್ಷಣ ಮಹಾವಿದ್ಯಾಲಯಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ಉಪನ್ಯಾಸಕರ ವ್ಯಾಸಂಗದ ಬಗ್ಗೆ ಗಮನವಹಿಸುವುದು.
4. ಉಪನ್ಯಾಸಕರ ಬಿ.ಇಡಿ ಅವಧಿಯು ಎರಡು ವರ್ಷಗಳ ಕಾಲ ಆಗಿರುವುದರಿಂದ ಸಂಬಂಧಪಟ್ಟ ಎಲ್ಲಾ ಉಪನ್ಯಾಸಕರ ಮಾಹಿತಿಯನ್ನು ಕಡ್ಡಾಯವಾಗಿ ಕಚೇರಿಯಲ್ಲಿ ಕಾಯ್ದಿರಿಸತಕ್ಕದ್ದು.
5. ಸದರಿ ಉಪನ್ಯಾಸಕರ ಬಿ.ಇಡಿ ಅವಧಿಯು ಮುಗಿಯುವವರೆಗೂ ಅವರು ಅದೇ ಕಾಲೇಜಿನಲ್ಲಿ ಇರುವುದರಿಂದ ಈ ಉಪನ್ಯಾಸಕರ ಕುರಿತು ಯಾವುದೇ ಮಾಹಿತಿಯನ್ನು ಕೇಂದ್ರ ಕಛೇರಿಗೆ ತಮ್ಮ ಮೂಲಕವೇ ಕಳುಹಿಸತಕ್ಕದ್ದು ಹಾಗೂ ಇಂತಹ ಉಪನ್ಯಾಸಕರು ಕೂಡಾ ತಮ್ಮ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಂದಲೇ ಸಲ್ಲಿಸುವಂತೆ ನೋಡಿಕೊಳ್ಳತಕ್ಕದ್ದು.
6. ಇಂತಹ ಉಪನ್ಯಾಸಕರ ಕುರಿತು ಸಂಬಂಧಿಸಿದ ಬಿ.ಇಡಿ ಕಾಲೇಜಿನ ಪ್ರಾಚಾರ್ಯರು ಕೋರಿದ ಮಾಹಿತಿಗಳಿಗೆ ಸ್ಪಂದಿಸುವುದು ಹಾಗೂ ಬಿ.ಇಡಿ ಕಾಲೇಜಿನ ತರಗತಿಗಳಿಗೆ ಹಾಜರಾಗದ ಬಗ್ಗೆ ದೂರುಗಳು ಬಂದಲ್ಲಿ ಜಿಲ್ಲಾ ಉಪ ನಿರ್ದೇಶಕರುಗಳು ಸೂಕ್ತ ಕ್ರಮವಹಿಸುವುದು.

4/7/17

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾ & ಪ್ರೌ ಶಿಕ್ಷಣ)ಬಹುಮಹಡಿಗಳ ಕಟ್ಟಡ, ಬೆಂಗಳೂರು-560012-ಮಾಹಿತಿಗಾಗಿ.
2. ನಿರ್ದೇಶಕರ ಆಪ್ತ ಶಾಖೆ, ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು-ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು.
4. ಕಚೇರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2013ನೇ ಸಾಲಿನಲ್ಲಿ ನೇಮಕಗೊಂಡ ಬಿ.ಇಡಿ. ಪದವಿ ಹೊಂದಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಬಿ.ಇಡಿ. ಪದವಿಯನ್ನು ಹೊಂದಲು ಕೋರ್ಸಿನ ಅವಧಿಗೆ ಶಿಷ್ಯ ವೇತನ ಪಾವತಿಸುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಪತ್ರ ಸಂಖ್ಯೆ :ಇಡಿ 189 ಟಿಪಿಯು 2015 ದಿನಾಂಕ :28-12-2016.

2) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪತ್ರ ಸಂಖ್ಯೆ :ಪಪೂಶಿಇ/ಸಿ-2/ಬಿಇಡಿ/206/11-12 (ಭಾಗ-2) ದಿನಾಂಕ : 27-05-2017.

ಪ್ರಸ್ತಾವನೆ :-

2013ನೇ ಸಾಲಿನಲ್ಲಿ ನೇಮಕಗೊಂಡಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಪೈಕಿ ಬಿ.ಇಡಿ. ಪದವಿ ಹೊಂದಿರದ ಉಪನ್ಯಾಸಕರು ನೇಮಕಗೊಂಡ ನಾಲ್ಕು ವರ್ಷಗಳ ಅವಧಿಯೊಳಗೆ ಬಿ.ಇಡಿ. ಪದವಿಯನ್ನು ಹೊಂದಬೇಕಾಗಿರುತ್ತದೆ. ನಾಲ್ಕು ವರ್ಷಗಳ ಅವಧಿ ಮುಗಿದ ನಂತರವೂ ಬಿ.ಇಡಿ. ಪದವಿಯನ್ನು ಹೊಂದದಿದ್ದಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಬೇಕಾಗಿರುತ್ತದೆ. ಆದ್ದರಿಂದ ಸದರಿ ಉಪನ್ಯಾಸಕರ ಸೇವೆಯನ್ನು ಮುಂದುವರೆಸಲು ಅನುಕೂಲವಾಗುವಂತೆ, ಬಿ.ಇಡಿ. ಪದವಿ ವ್ಯಾಸಂಗ ಮಾಡಲು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಇಂತಹ ಉಪನ್ಯಾಸಕರಿಗೆ ಸೂಕ್ತ ಶಿಷ್ಯ ವೇತನವನ್ನು ಮಂಜೂರು ಮಾಡುವಂತೆಯೂ ತಿಳಿಸಲಾಗಿತ್ತು.

ಕೆಲವು ಉಪನ್ಯಾಸಕರು ಮನವಿ ಸಲ್ಲಿಸಿ, ಪ್ರತೀ ತಿಂಗಳು ವೇತನದಲ್ಲಿ ಎನ್‌ಪಿಎಸ್, ಕೆಜಿಐಡಿ, ಎಲ್‌ಐಸಿ ಮತ್ತು ಗೃಹ ಸಾಲ ಇತ್ಯಾದಿ ಕಂತುಗಳ ಕಟಾವಣೆಗಳನ್ನು ಭರಿಸಿ, ಜೀವನ ಸಾಗಿಸಲು ಪೂರ್ಣ ವೇತನಸಹಿತ ಬಿಇಡಿ ಪೂರೈಸಲು ಅವಕಾಶ ನೀಡುವಂತೆ ಕೋರಿರುತ್ತಾರೆ. ಆದ್ದರಿಂದ ಸದರಿ ಉಪನ್ಯಾಸಕರುಗಳಿಗೆ ಶೇಕಡ 50ರಷ್ಟು ವೇತನ ಪಾವತಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಸೂಕ್ತ ಆದೇಶ ಹೊರಡಿಸುವಂತೆ ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಕೋರಿರುತ್ತಾರೆ.

ಬಿ.ಇಡಿ. ಪದವಿಯ ಅವಧಿಯನ್ನು ಡೈಸ್-ನಾನ್(Dies non) ಮತ್ತು ವೇತನರಹಿತ ಅವಧಿ ಎಂದು ಪರಿಗಣಿಸಲಾಗುವುದು. ಆದಾಗ್ಯೂ ಈ ಅವಧಿಗೆ ಸೂಕ್ತ ಶಿಷ್ಯವೇತನವನ್ನು ನೀಡಲು ಪರಿಗಣಿಸಲಾಗುವುದೆಂದು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿರುತ್ತದೆ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ-

**ಸರ್ಕಾರದ ಆದೇಶ ಸಂಖ್ಯೆ: ಇಡಿ 189 ಟಿಪಿಯು 2015**
**ಬೆಂಗಳೂರು, ದಿನಾಂಕ:1ನೇ ಜುಲೈ 2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2013ನೇ ಸಾಲಿನಲ್ಲಿ ಬಿ.ಇಡಿ. ಪದವಿಯನ್ನು ಹೊಂದಿಲ್ಲದೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಕಗೊಡಿರುವ ಉಪನ್ಯಾಸಕರುಗಳಿಗೆ ಬಿ.ಇಡಿ. ಪದವಿ ಶಿಕ್ಷಣ ಪಡೆಯುವ ಅವಧಿಗೆ ಮಾಸಿಕ ರೂ.24,000/-ರಂತೆ ಏಕ ರೀತಿಯ ಶಿಷ್ಯ ವೇತನ (ಸ್ಟೈಫಂಡ್) ನೀಡಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ :ಆಇ 462 ವೆಚ್ಚ-8/2017 ದಿನಾಂಕ :28-06-2017ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ರಾಮಕೃಷ್ಣಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ).

ಇವರಿಗೆ:-

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
3. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ(ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಮೂಲಕ).
4. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.